ಕರ್ನಾಟಕ ಸರ್ಕಾರ

ಸಾರಿಗೆ ಇಲಾಖೆ

ಸಂ.ಸಾಆ/ನೋಂದಣಿ-1/ಪಿಆರ್- 703/2020-21

ಸಾರಿಗೆ ಆಯುಕ್ತರ ಕಛೇರಿ, 1ನೇ ಮಹಡಿ,
ಟಿಟಿಎಂಸಿ ಕಟ್ಟಡ, ಕೆ.ಹೆಚ್.ರಸ್ತೆ, ಶಾಂತಿನಗರ,
ಬೆಂಗಳೂರು-27, ದಿನಾಂಕ:21-12-2020

ಇವರಿಗೆ

ರಾಜ್ಯದ ಎಲ್ಲಾ ಉಪ ಸಾರಿಗೆ ಆಯುಕ್ತರು ಮತ್ತು
ಹಿರಿಯ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ಹಾಗೂ
ಪ್ರಾದೇಶಿಕ ಮತ್ತು ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು.

ಮಾನ್ಯರೆ,

ವಿಷಯ: ಬಹಿರಂಗ ಹರಾಜಿನಲ್ಲಿ ಪಡೆದ ಮಿಲಿಟರಿ / ಪೊಲೀಸ್ ಹಾಗೂ ಇತರೆ ಇಲಾಖಾ ವಾಹನಗಳ ತಯಾರಿಕಾ ವರ್ಷವನ್ನು ನಿಖರವಾಗಿ ನಮೂದಿಸುವ ಕುರಿತು.

ಉಲ್ಲೇಖ: ದಿನಾಂಕ:15-12-2020 ರಂದು ಸಾರಿಗೆ ಆಯುಕ್ತರ ಅಧ್ಯಕ್ಷತೆಯಲ್ಲಿ ಕೇಂದ್ರ ಕಛೇರಿಯಲ್ಲಿ ನಡೆದ ಪರಿಶೀಲನಾ ಸಭೆಯಲ್ಲಿ ನೀಡಿದ ಸೂಚನೆಗಳು.

**

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಕೇಂದ್ರ ಮೋಟಾರು ವಾಹನಗಳ ನಿಯಮಗಳು 1989ರ ನಿಯಮ 57 ರಡಿ (Transfer of ownership of vehicle purchased in public auction) (1) The person who has acquired or purchased a motor vehicle at a public auction, conducted by or an behalf of the Central Government or a State Government, shall make an application in Form-32 within 30 days of taking possession of the vehicle to the Registering authority ... ಎಂದು ಹೇಳಲಾಗಿದೆ ಹಾಗೂ ಇದೇ ನಿಯಮದ ಉಪ ನಿಯಮ (2)ರಲ್ಲಿ ಬಹಿರಂಗ ಹರಾಜಿನಲ್ಲಿ ಪಡೆದ ವಾಹನದ ಮರು ನೋಂದಣಿ ಬಗ್ಗೆ ಮತ್ತು ಬಹಿರಂಗ ಹರಾಜಿನ ನಡಾವಳಿಯನ್ನು ಪರಿಶೀಲಿಸದೆ ಇಂತಹ ವಾಹನಗಳ ವರ್ಗಾವಣೆ ಮಾಡಬಾರದೆಂದು ಸಹ ಹೇಳಲಾಗಿದೆ.

ದಿನಾಂಕ:15-12-2020 ರಂದು ಸಾರಿಗೆ ಆಯುಕ್ತರ ಅಧ್ಯಕ್ಷತೆಯಲ್ಲಿ ಅಪರ ಸಾರಿಗೆ ಆಯುಕ್ತರುಗಳೊಂದಿಗೆ ಕೇಂದ್ರ ಕಛೇರಿಯಲ್ಲಿ ನಡೆದ ಪರಿಶೀಲನಾ ಸಭೆಯಲ್ಲಿ ಚರ್ಚಿಸಿದ ಪ್ರಕಾರ, ಬಹಿರಂಗ ಹರಾಜಿನಲ್ಲಿ ಪಡೆದ ಮಿಲಿಟರಿ / ಪೊಲೀಸ್ ಹಾಗೂ ಇತರೆ ಇಲಾಖಾ ವಾಹನಗಳಿಗೆ ಸಂಬಂಧಿಸಿದಂತೆ ಅಂತಹ ವಾಹನಗಳ ವರ್ಗಾವಣೆ ಸಮಯದಲ್ಲಿ ವಾಹನಗಳ ತಯಾರಿಕಾ ವರ್ಷವನ್ನು ಸರಿಯಾಗಿ ನಮೂದಿಸದೆ, ಅಂದರೆ ಹಳೆಯ ವಾಹನಗಳಿಗೂ ಸಹ ಇತ್ತೀಚಿನ ತಯಾರಿಕಾ ವರ್ಷವನ್ನು ನೋಂದಣಿ ಪ್ರಮಾಣಪತ್ರಗಳಲ್ಲಿ ಅನಧಿಕೃತವಾಗಿ ನಮೂದಿ ಸುತ್ತಿರುವುದಾಗಿ ದೂರುಗಳು ಬರುತ್ತಿದ್ದು, ಈ ಬಗ್ಗೆ ಪರಿಶೀಲಿಸಿ, ವರ್ಗಾವಣೆ / ಮರು ನೋಂದಣಿ ಮಾಡುವ ಸಮಯದಲ್ಲಿ ಅಂತಹ ವಾಹನಗಳ ನಿಖರವಾದ ತಯಾರಿಕಾ ವರ್ಷವನ್ನು ನಮೂದಿಸುವ ಕುರಿತು ಕ್ರಮ ವಹಿಸಲು ನೋಂದಣಿ ಪ್ರಾಧಿಕಾರಗಳಿಗೆ ಸೂಚನೆ ನೀಡಲು ತಿಳಿಸಲಾಗಿರುತ್ತದೆ.

ಈಗಾಗಲೇ ತಮ್ಮ ಕಛೇರಿಗಳಲ್ಲಿ ಇಂತಹ ಪ್ರಕರಣಗಳಲ್ಲಿ ಕಡತ ಪರಿಶೀಲಿಸಿ ನಿಖರತೆಯನ್ನು ಖಚಿತಪಡಿಸಿಕೊಳ್ಳಲು ಸೂಚಿಸುತ್ತಾ, ಇನ್ನುಮುಂದೆ, ಬಹಿರಂಗ ಹರಾಜಿನಲ್ಲಿ ಪಡೆದ ಮಿಲಿಟರಿ / ಪೊಲೀಸ್ ಹಾಗೂ ಇತರೆ ಇಲಾಖಾ ವಾಹನಗಳ ವರ್ಗಾವಣೆ / ಮರು ನೋಂದಣಿ ಮಾಡುವ ಸಮಯದಲ್ಲಿ, ಅಂತಹ

--2

ವಾಹನಗಳ ಸಂಬಂಧಪಟ್ಟ ವಾಹನ ತಯಾರಿಕಾ ಕಂಪೆನಿ / ಡೀಲರ್/ ವಿಮಾ ಕಂಪೆನಿಗಳ ಮುಖಾಂತರ ನಿಖರವಾದ ದಾಖಲೆಯೊಂದಿಗೆ ಮಾಹಿತಿಯನ್ನು ಪಡೆದು ವಾಹನ ತಯಾರಿಕಾ ವರ್ಷವನ್ನು ನಮೂದಿಸಲು ಕ್ರಮ ವಹಿಸುವಂತೆ ಈ ಮೂಲಕ ಸೂಚಿಸಲಾಗಿದೆ. ಈ ಬಗ್ಗೆ ಕಛೇರಿ ಮುಖ್ಯಸ್ಥರುಗಳು ಸಂಬಂಧಿಸಿದ ವಿಭಾಗದ ಅಧೀಕ್ಷಕರು / ವಿಷಯ ನಿರ್ವಾಹಕರಿಗೆ ಸೂಕ್ತ ಸೂಚನೆಗಳನ್ನು ನೀಡಲು ತಿಳಿಸಲಾಗಿದೆ. ಅಲ್ಲದೆ, ಸದರಿ ವಿಷಯದಲ್ಲಿ ವೈಯಕ್ತಿಕ ಗಮನಹರಿಸಿ, ದೂರುಗಳಿಗೆ ಅವಕಾಶ ನೀಡದಂತೆ ಕ್ರಮ ವಹಿಸಲು ಆಯಾ ನೋಂದಣಿ ಪ್ರಾಧಿಕಾರಗಳಿಗೆ ಸೂಚಿಸಿದೆ.

ಇಂತಹ ನ್ಯೂನತೆಗಳು ಗಮನಕ್ಕೆ ಬಂದಲ್ಲಿ, ಸಂಬಂಧಪಟ್ಟ ನೋಂದಣಿ ಪ್ರಾಧಿಕಾರ / ಅಧಿಕಾರಿಯನ್ನೇ ವೈಯಕ್ತಿಕವಾಗಿ ಜವಾಬ್ದಾರರೆಂದು ಪರಿಗಣಿಸಿ ಕ್ರಮ ತೆಗೆದುಕೊಳ್ಳಲಾಗುವುದು.

ತಮ್ಮ ವಿಶ್ವಾಸಿ,

ಆಯುಕ್ತರು, ಸಾರಿಗೆ ಮತ್ತು
ರಸ್ತೆ ಸುರಕ್ಷತೆ, ಬೆಂಗಳೂರು

ಪ್ರತಿಯನ್ನು
1. ರಾಜ್ಯದ ಎಲ್ಲಾ ಅಪರ ಸಾರಿಗೆ ಆಯುಕ್ತರು, ಜಂಟಿ ಸಾರಿಗೆ ಆಯುಕ್ತರು ಮತ್ತು ಉಪ ಸಾರಿಗೆ ಆಯುಕ್ತರುಗಳಿಗೆ ಮಾಹಿತಿಗಾಗಿ ಮತ್ತು ಸೂಕ್ತ ಕ್ರಮಕ್ಕಾಗಿ ಕಳುಹಿಸಿಕೊಡಲಾಗಿದೆ.
2. ಅಪರ ಸಾರಿಗೆ ಆಯುಕ್ತರು (ಪರಿಸರ & ಇ-ಆಡಳಿತ) ಬೆಂಗಳೂರು ಇವರಿಗೆ ಮಾಹಿತಿಗಾಗಿ ಮತ್ತು ಸದರಿ ಪತ್ರದ ಪ್ರತಿಯನ್ನು ಇಲಾಖೆಯ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ನೀಡಲಾಗಿದೆ.
3. ಸಾರಿಗೆ ಆಯುಕ್ತರ ಆಪ್ತ ಶಾಖೆಗೆ ಮಾಹಿತಿಗಾಗಿ.